1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ- 120/2025

ಪ್ರಾಸಾಃ- 1 ಚಾಸಾಃ- 1

| | | |
|---|---|---|
| ಸಾಕ್ಷಿಯ ಹೆಸರು | : | ಯಮುನಮ್ಮ |
| ಗಂಡನ ಹೆಸರು | : | ಚಾಂದ್ ವಾಲಿ |
| ವಯಸ್ಸು | : | 45 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಹೊನ್ನಳ್ಳಿ |

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026

ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ

ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. ಅವರೆಲ್ಲಾ ನನ್ನ ಸಂಬಂಧಿಕರು. ಚಾಸಾ 4 ನನ್ನ ತಮ್ಮ. ಚಾಸಾ 5 ತಮ್ಮನ ಹೆಂಡತಿ. ಚಾಸಾ 4 ಮತ್ತು 5 ರವರು ಕುರುಗೋಡು ತಾಲ್ಲೂಕು ಓರವಾಯಿ ಗ್ರಾಮದಲ್ಲಿರುತ್ತಾರೆ. ನನಗೆ ಚಾಸಾ 6 ರಿಂದ 11 ರವರು ಗೊತ್ತು.

ಆರೋಪಿಗಳು ನಮ್ಮ ಮೇಲೆ ಜಗಳ ಮಾಡಿ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಆದರೆ ಜಮೀನು ವಿಚಾರವಾಗಿ ವ್ಯಾಜ್ಯ ಇದ್ದ ಕಾರಣ ಕೋಪದಲ್ಲಿ ದೂರು ಕೊಟ್ಟಿದ್ದೆ. ಪೋಲೀಸರು ಬರೆದ ದೂರಿಗೆ ನಾನು ಹೆಬ್ಬೆಟ್ಟಿನ ಗುರುತು ಹಾಕಿದ್ದೆ. ದೂರನ್ನು ನಿಪಿ-1 ಎಂದು ಗುರುತಿಸಲಾಯಿತು. ನಂತರ ಪೋಲೀಸರು ಹೇಳಿದ ಪ್ರಕಾರ ಮಾನ್ಯ ನ್ಯಾಯಾಲಯಕ್ಕೆ ಹೋಗಿ ಹೇಳಿಕೆ ಕೊಟ್ಟಿದ್ದೆ. ಅದನ್ನು ನಿಪಿ-2 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).

ಪಾಟೀ ಸವಾಲುಃ ಸರಕಾರಿ ಅಭಿಯೋಜಕರವರಿಂದಃ

ನಿಪಿ-1 ಮತ್ತು 2 ರಲ್ಲಿ ಹೇಳಿರುವಂತೆ ನನ್ನ ತಮ್ಮನಿಗೆ ಭಾಗ ಕೊಡುವ ವಿಚಾರದಲ್ಲಿ ಪಂಚಾಯಿತಿ ನಡೆದಿದ್ದು ಆದರೆ ಆರೋಪಿಗಳು ಸರಿಯಾಗಿ ಭಾಗ ಕೊಟ್ಟಿಲ್ಲ, ದಿಃ 10-8-2024 ರಂದು ನಾನು, ನನ್ನ ತಮ್ಮ ಹಾಗೂ ಆತನ ಹೆಂಡತಿ, ನನ್ನ ತಮ್ಮನ ಭಾಗಕ್ಕೆ ಬಂದ ಗದ್ದೆಯಲ್ಲಿ ನಾಟಿ ಮಾಡಲು ಹೋಗಿದ್ದಾಗ ಮಧ್ಯಾಹ್ನ 3-00 ಗಂಟೆ ಸಮಯಕ್ಕೆ ಆರೋಪಿಗಳು ಅಲ್ಲಿಗೆ ಬಂದು ನನ್ನ ತಮ್ಮನಿಗೆ ಅವಾಚ್ಯ ಶಬ್ದಗಳಿಂದ ಬೈದು ಈ ಜಮೀನು ನಿನ್ನದಲ್ಲ ಎಂದು ಹೇಳಿದಾಗ ನಾನು ಪ್ರಶ್ನೆ ಮಾಡಿದ್ದು ಆಗ ಆರೋಪಿಗಳು ನಮ್ಮನ್ನುಎಳೆದಾಡಿ ಕೆಳಗೆ ಕೆಡವಿ, ಕಾಲುಗಳಿಂದ ಬೆನ್ನಿಗೆ, ಹೊಟ್ಟೆಗೆ ಒದ್ದು, ನಾನು ಬಿಡಿಸಲು ಹೋದಾಗ ನನ್ನ ಕೂದಲು ಮತ್ತು ಕೈ ಹಿಡಿದು ಎಳೆದಾಡಿ, ನನ್ನ ಮಾನ ಹೋಗುವ ರೀತಿಯಲ್ಲಿ ಸಾರ್ವಜನಿಕವಾಗಿ ಅವಮಾನ ಮಾಡಿದ್ದು ಮತ್ತು ಮತ್ತೊಮ್ಮೆ ಬಂದರೆ ಸಾಯಿಸುತ್ತೇವೆ ಎಂದು ಬೆದರಿಕೆ ಹಾಕಿದ್ದರು ಎಂದರೆ ಸರಿಯಲ್ಲ. ನನ್ನ ಕೈ ಹಿಡಿದು ಎಳೆದಾಡಿ ಕಪಾಳಕ್ಕೆ ಮತ್ತು ತಲೆಗೆ ಹೊಡೆದರು ಎಂದರೆ ಸರಿಯಲ್ಲ.

ಆ ರೀತಿ ಘಟನೆ ನಡೆದಿದ್ದರೂ ಸಹ ಆರೋಪಿಗಳು ಹತ್ತಿರದ ಸಂಬಂಧಿಕರಾಗಿದ್ದ ಕಾರಣ ಈಗ ಅವರ ಜೊತೆ ಜಮೀನು ವಿಚಾರವಾಗಿ ರಾಜಿ ಮಾಡಿಕೊಂಡು ಕೇಸಿನಲ್ಲಿ ಅವರಿಗೆ ಸಹಾಯವಾಗಲಿ ಎಂದು ಈಗ ಸುಳ್ಳು ಸಾಕ್ಷಿ ಹೇಳಲು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನೇ ಸ್ವತಃ ಮಾನ್ಯ ನ್ಯಾಯಾಲಯಕ್ಕೆ ಹೋಗಿ ನಿಪಿ-2 ರಂತೆ ಹೇಳಿಕೆ ಕೊಟ್ಟಿದ್ದೇನೆ ಆದರೆ ಈಗ ಆರೋಪಿಗಳ ಮಾತು ಕೇಳಿ ಅದಕ್ಕೆ ವಿರುದ್ಧವಾಗಿ ಸುಳ್ಳು ಸಾಕ್ಷಿ ಹೇಳಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

**<u>ಸತ್ರ ಮೊಕದ್ದಮೆ ಸಂಖ್ಯೆಃ- 120/2025</u>**

**ಪ್ರಾಸಾಃ- 2 ಚಾಸಾಃ- 4**

| | | |
|---|---|---|
| ಸಾಕ್ಷಿಯ ಹೆಸರು | : | ರಾಜಾಭಕ್ಷಿಸಾಬ್ |
| ತಂದೆಯ ಹೆಸರು | : | ಬಾಬು ಸಾಬ್ |
| ವಯಸ್ಸು | : | 37 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಓರವಾಯಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. ಅವರೆಲ್ಲಾ ನನ್ನ ಸಂಬಂಧಿಕರು. ಚಾಸಾ 1 ನನ್ನ ಅಕ್ಕ. ಚಾಸಾ 5 ನನ್ನ ಹೆಂಡತಿ. ನಾವು ಕುರುಗೋಡು ತಾಲ್ಲೂಕು ಓರವಾಯಿ ಗ್ರಾಮದಲ್ಲಿರುತ್ತಾರೆ. ನನಗೆ ಚಾಸಾ 6 ರಿಂದ 11 ರವರು ಗೊತ್ತು.

ಆರೋಪಿಗಳು ನಮ್ಮ ಮೇಲೆ ಜಗಳ ಮಾಡಿ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಆದರೆ ಜಮೀನು ವಿಚಾರವಾಗಿ ವ್ಯಾಜ್ಯ ಇದ್ದ ಕಾರಣ ಕೋಪದಲ್ಲಿ ನನ್ನ ಅಕ್ಕ ದೂರು ಕೊಟ್ಟಿದ್ದರು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ. ಆದರೆ ಈಗ ತೋರಿಸಿದ ಪಂಚನಾಮೆಯಲ್ಲಿ ನನ್ನ ಸಹಿ ಇದೆ. ಅದನ್ನು ನಿಪಿ-3 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ 2 ಪೋಟೋಗಳಲ್ಲಿ ನಾನು ಕಾಣಿಸುತ್ತೇನೆ. ನನ್ನ ಸಹಿಯನ್ನು ಪೋಲೀಸ್ ಠಾಣೆಯಲ್ಲಿ ಹಾಕಿಸಿಕೊಂಡಿದ್ದಾರೆ ಆದರೆ ವಿಚಾರ ಗೊತ್ತಿಲ್ಲ. ಪೋಟೋಗಳನ್ನು ಏಕೆ ತೆಗೆದರು ಗೊತ್ತಿಲ್ಲ. ಈಗ ತೋರಿಸಿದ ನಕಾಶೆಯಲ್ಲಿ ನನ್ನ ಸಹಿ ಇದೆ. ಆದರೆ ಅದನ್ನು ಯಾವಾಗ ತಯಾರು



ಮಾಡಿದರು ಎನ್ನುವುದು ಗೊತ್ತಿಲ್ಲ. ಅದನ್ನು ನಿಪಿ-6 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿ-6(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).

ಪಾಟೀ ಸವಾಲುಃ ಸರಕಾರಿ ಅಭಿಯೋಜಕರವರಿಂದಃ

ಈಗ ಓದಿ ಹೇಳಿದಂತೆ ದಿಃ 11-8-2024 ರಂದು " ನಾನು ------ ದೂರು ನೀಡಿರುತ್ತಾಳೆ " ಎನ್ನುವ ಹೇಳಿಕೆಯನ್ನು ಪೋಲೀಸರಿಗೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಹೇಳಿರುವಂತೆ ನನ್ನ ಮತ್ತು ಆರೋಪಿಗಳ ಮಧ್ಯ ಆಸ್ತಿ ವಿಚಾರದಲ್ಲಿ ಜಗಳ ಇದ್ದು ಪಂಚಾಯಿತಿಗಳು ಆಗಿದ್ದವು ಹಾಗೂ ದಿಃ 10-8-2024 ರಂದು ನಾನು, ನನ್ನ ಹೆಂಡತಿ ಮತ್ತು ನನ್ನ ಅಕ್ಕ ನನಗೆ ಬಂದ ಗದ್ದೆಯಲ್ಲಿ ಸಸಿ ಹಚ್ಚಲು ಹೋಗಿದ್ದಾಗ 3-00 ಗಂಟೆ ಸಮಯಕ್ಕೆ ಆರೋಪಿಗಳೆಲ್ಲಾ ಅಲ್ಲಿಗೆ ಬಂದು ನನ್ನನ್ನು ಅವಾಚ್ಯ ಶಬ್ದಗಳಿಂದ ಬೈದು ಈ ಜಮೀನು ನಿನ್ನದಲ್ಲ ಎಂದು ಎಳೆದಾಡಿ, ಕಪಾಳಕ್ಕೆ ತಲೆಗೆ ಹೊಡೆದರು ಎಂದರೆ ಸರಿಯಲ್ಲ. ನನ್ನನ್ನು ಎಳೆದು ಕೆಳಗೆ ಕೆಡವಿ, ಕಾಲುಗಳಿಂದ ಬೆನ್ನಿಗೆ, ಹೊಟ್ಟೆಗೆ ಒದ್ದರು. ಆಗ ನಮ್ಮ ಅಕ್ಕ ಬಿಡಿಸಲು ಬಂದಾಗ ಅವರ ತಲೆ ಕೂದಲು ಮತ್ತು ಕೈ ಹಿಡಿದು ಎಳೆದಾಡಿ ಅವರ ಮಾನಕ್ಕೆ ಭಂಗ ಬರುವ ರೀತಿ ಮಾಡಿದರು ಹಾಗೂ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ನನ್ನ ಅಕ್ಕ ದೂರು ಕೊಟ್ಟ ನಂತರ ದಿಃ 11-8-2024 ರಂದು ಪೋಲೀಸರು ಬಂದಿದ್ದು ಚಾಸಾ 2 ಮತ್ತು 3 ರವರನ್ನು ಕರೆಸಿ ನಾನು ತೋರಿಸಿದ ಜಾಗದಲ್ಲಿ ಬೆಳಿಗ್ಗೆ 11-30 ರಿಂದ 12-15 ರವರೆಗೆ ನಿಪಿ-3 ರಂತೆ ಪಂಚನಾಮೆ ಕ್ರಮ ಜರುಗಿಸಿ ನಿಪಿ-4 ಮತ್ತು 5 ರ ಪೋಟೋಗಳನ್ನು ತೆಗೆದು, ನಿಪಿ-6 ರಂತೆ ಕಚ್ಚಾ ನಕಾಶೆ ತಯಾರು ಮಾಡಿ ನಮ್ಮ ಸಹಿಗಳನ್ನು ತೆಗೆದುಕೊಂಡರು ಎಂದರೆ ಸರಿಯಲ್ಲ. ಈ ಎಲ್ಲಾ ವಿಚಾರಗಳು ಸತ್ಯವಾಗಿದ್ದರೂ ಸಹ ಈಗ ಜಮೀನು ವಿಚಾರವಾಗಿ ಆರೋಪಿಗಳ ಜೊತೆ ರಾಜಿ ಮಾಡಿಕೊಂಡು ಕೇಸಿನಲ್ಲಿ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಕೀಲರಿಂದಃ

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ವಿಶೇಷ ನ್ಯಾಯಾಲಯ, ಬಳ್ಳಾರಿ

ಸತ್ರ ಮೊಕದ್ದಮೆ ಸಂಖ್ಯೆಃ- 120/2025

ಪ್ರಾಸಾಃ- 3 ಚಾಸಾಃ- 5

| | | |
|---|---|---|
| ಸಾಕ್ಷಿಯ ಹೆಸರು | : | ಸಣ್ಣ ಖಾಸಿಂ ಬೀ |
| ಗಂಡನ ಹೆಸರು | : | ರಾಜಾ ಭಕ್ಷಿ |
| ವಯಸ್ಸು | : | 30 ವರ್ಷ |
| ವೃತ್ತಿ | : | ವ್ಯವಸಾಯ |
| ವಾಸಸ್ಥಳ | : | ಓರವಾಯಿ |

**ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ- 24.7.2026**

**ಮುಖ್ಯ ವಿಚಾರಣೆಃ ವಿಶೇಷ ಅಭಿಯೋಜಕರಿಂದ**

ನ್ಯಾಯಾಲಯದಲ್ಲಿರುವ ಆರೋಪಿಗಳು ಗೊತ್ತು. ಅವರೆಲ್ಲಾ ನನ್ನ ಸಂಬಂಧಿಕರು. ಚಾಸಾ 4 ನನ್ನ ಗಂಡ. ಚಾಸಾ 1 ನನ್ನ ಗಂಡನ ಅಕ್ಕ. ನಾವು ಕುರುಗೋಡು ತಾಲ್ಲೂಕು ಓರವಾಯಿ ಗ್ರಾಮದಲ್ಲಿರುತ್ತಾರೆ. ನನಗೆ ಚಾಸಾ 6 ರಿಂದ 11 ರವರು ಗೊತ್ತು.

ಆರೋಪಿಗಳು ನಮ್ಮ ಮೇಲೆ ಜಗಳ ಮಾಡಿ ಹಲ್ಲೆ ಮಾಡಿಲ್ಲ, ಅವಾಚ್ಯ ಶಬ್ದಗಳಿಂದ ಬೈದಿಲ್ಲ, ಪ್ರಾಣ ಬೆದರಿಕೆ ಹಾಕಿಲ್ಲ, ಆದರೆ ಜಮೀನು ವಿಚಾರವಾಗಿ ವ್ಯಾಜ್ಯ ಇದ್ದ ಕಾರಣ ಕೋಪದಲ್ಲಿ ನನ್ನ ಅಕ್ಕ ದೂರು ಕೊಟ್ಟಿದ್ದರು. ನಾನು ಪೋಲೀಸರಿಗೆ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಬೇಕೆಂದು ಮತ್ತು ಸಾಕ್ಷಿಯನ್ನು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರು ಕೋರಿದ್ದು, ಕೋರಿಕೆ ಸಕಾರಣಗಳಿಂದ ಕೂಡಿದ್ದರಿಂದ ಅದನ್ನು ಪುರಸ್ಕರಿಸಲಾಗಿದೆ ಮತ್ತು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಲು ಮತ್ತು ಪಾಟೀ ಸವಾಲು ಮಾಡಲು ಪ್ರಾಜ್ಞ ಅಭಿಯೋಜಕರಿಗೆ ಅನುಮತಿ ನೀಡಲಾಯಿತು).

<u>ಪಾಟೀ ಸವಾಲುಃ ಸರಕಾರಿ ಅಭಿಯೋಜಕರವರಿಂದಃ</u>

ಈಗ ಓದಿ ಹೇಳಿದಂತೆ ದಿಃ 11-8-2024 ರಂದು " ನಾನು ------ ದೂರು ನೀಡಿರುತ್ತಾಳೆ ಎಂದು ತಿಳಿಯಿತು " ಎನ್ನುವ ಹೇಳಿಕೆಯನ್ನು ಪೋಲೀಸರಿಗೆ



ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯಲ್ಲಿ ಹೇಳಿರುವಂತೆ ನನ್ನ ಗಂಡ ಮತ್ತು ಆರೋಪಿಗಳ ಮಧ್ಯ ಆಸ್ತಿ ವಿಚಾರದಲ್ಲಿ ಜಗಳ ಇದ್ದು ಪಂಚಾಯಿತಿಗಳು ಆಗಿದ್ದವು ಹಾಗೂ ದಿಃ 10-8-2024 ರಂದು ನಾನು, ನನ್ನ ಗಂಡ ಮತ್ತು ಅವರ ಅಕ್ಕ ನನ್ನ ಗಂಡನಿಗೆ ಬಂದ ಗದ್ದೆಯಲ್ಲಿ ಸಸಿ ಹಚ್ಚಲು ಹೋಗಿದ್ದಾಗ 3-00 ಗಂಟೆ ಸಮಯಕ್ಕೆ ಆರೋಪಿಗಳೆಲ್ಲಾ ಅಲ್ಲಿಗೆ ಬಂದು ನನ್ನ

ಗಂಡನಿಗೆ ಅವಾಚ್ಯ ಶಬ್ದಗಳಿಂದ ಬೈದು ಈ ಜಮೀನು ನಿನ್ನದಲ್ಲ ಎಂದು ಎಳೆದಾಡಿ, ಕಪಾಳಕ್ಕೆ ತಲೆಗೆ ಹೊಡೆದರು ಎಂದರೆ ಸರಿಯಲ್ಲ. ನನ್ನ ಗಂಡನನ್ನು ಎಳೆದು ಕೆಳಗೆ ಕೆಡವಿ, ಕಾಲುಗಳಿಂದ ಬೆನ್ನಿಗೆ, ಹೊಟ್ಟೆಗೆ ಒದ್ದರು. ಆಗ ಚಾಸಾ 1 ಬಿಡಿಸಲು ಬಂದಾಗ ಅವರ ತಲೆ ಕೂದಲು ಮತ್ತು ಕೈ ಹಿಡಿದು ಎಳೆದಾಡಿ ಅವರ ಮಾನಕ್ಕೆ ಭಂಗ ಬರುವ ರೀತಿ ಮಾಡಿದರು ಹಾಗೂ ಅವಾಚ್ಯ ಶಬ್ದಗಳಿಂದ ಬೈದು ಪ್ರಾಣ ಬೆದರಿಕೆ ಹಾಕಿದರು ಎಂದರೆ ಸರಿಯಲ್ಲ.

ಈ ಎಲ್ಲಾ ವಿಚಾರಗಳು ಸತ್ಯವಾಗಿದ್ದರೂ ಸಹ ಈಗ ಜಮೀನು ವಿಚಾರವಾಗಿ ಆರೋಪಿಗಳ ಜೊತೆ ರಾಜಿ ಮಾಡಿಕೊಂಡು ಕೇಸಿನಲ್ಲಿ ಅವರಿಗೆ ಸಹಾಯ ಆಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಪಾಟೀ ಸವಾಲುಃ ಆರೋಪಿ ಪರ ಶ್ರೀ    ವಕೀಲರಿಂದಃ</u>

ಪಾಟೀ ಸವಾಲು ಇಲ್ಲ ಎಂದು ಹೇಳಿದ್ದಾರೆ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೆ. ಸರಿ ಇದೆ.

1 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ವಿಶೇಷ ನ್ಯಾಯಾಲಯ, ಬಳ್ಳಾರಿ.